ಸಿಸಿನಂ. 524/2018

ಪಿಡಬ್ಲ್ಯೂ: 2

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>

ಸಿಸಿ ನಂ. 524/2018

ಪಿಡಬ್ಲೂ : 2

| | | |
|---|---|---|
| ಹೆಸರು | : | ಶ್ರೀ ನಾಗಾನಂದ |
| ತಂದೆಯ ಹೆಸರು | : | ಎನ್ನಪ್ಪ ನೆಗಳೂರ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಎ ಎಸ್ ಐ ಕುಮಟಾ ಪೋಲಿಸ್ ಠಾಣೆ |
| ವಾಸ್ತವ್ಯ | : | ಕುಮಟಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 04-04-2026 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ದಂಡ ಪ್ರಕ್ರೀಯೆ ಸಂಹಿತೆ ಕಲಂ 299 ರಡಿಯಲ್ಲಿ ಪಿರ್ಯಾದುದಾರರ ಪರವಾಗಿ : ಅವರ ವಕೀಲರಿಂದಃ</u>**

ನಾನು ಕಳೆದ ಎರಡುವರೆ ವರ್ಷಗಳಿಂದ ಕುಮಟಾ ಆರಕ್ಷಕ ಠಾಣೆಯಲ್ಲಿ ಎ ಎಸ್ ಐ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ .

2. ದಿಃ 28-04-2025 ರಂದು ನಮ್ಮ ಪಿಐ ಸಾಹೇಬರ ಆದೇಶದ ಮೇರೆಗೆ ಸಿಸಿ ನಂ. 524/2018 ರಲ್ಲಿ ಆರೋಪಿತನಾದ ಪ್ರತಾಪ ಅಮೃತ ಗೋಸಾವಿ, ಸಾಃ ಯಲ್ಲಾಪುರ ಇತನ ವಿರುದ್ಧ ಇರುವ ಉದ್ಘೋಷಣಾ ಪ್ರತಿಯನ್ನು ಪಡೆದುಕೊಂಡು ಆರೋಪಿಯ ಮನೆ ಇರುವ ಯಲ್ಲಾಪುರ ತಟಗಾರ ಕ್ರಾಸ್ , ಗಣಪತಿ ಗಲ್ಲಿ, ಯಲ್ಲಾಪುರ ಇಲ್ಲಿಗೆ ಹೋಗಿ ನೋಡಲಾಗಿ ಆರೋಪಿ ಮನೆಯಲ್ಲಿ ಇರಲಿಲ್ಲ . ಅವರ ಹೆಂಡತಿ ಇದ್ದರು . ಆರೋಪಿ ಬಗ್ಗೆ ವಿಚಾರಿಸಲಾಗಿ ಅವರು ಡ್ರ್ಯಾವಿಂಗ್ ಕೆಲಸ ಮಾಡುತ್ತಾರೆ ಮನೆಗೆ ಬರುವುದಿಲ್ಲಾ ಎಂದು ಹೇಳಿದರು . ಆಗ ಇಬ್ಬರು ಪಂಚರಾದ ಅಶೋಕ ಅಣ್ಣಪ್ಪ ಗೌಡಾ ಹಾಗೂ ಸಂದೀಪ ದತ್ತಾರಾಮ ನಾಗೇಕರ ಇವರ ಸಮಕ್ಷಮ ಉದ್ಘೋಷಣಾ ಪ್ರತಿಯನ್ನು ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ

ಸಿಸಿನಂ. 524/2018

ಪಿಡಬ್ಲ್ಯೂ: 2

ಆರೋಪಿಯ ಮನೆಯ ಗೋಡೆಗೆ ಅಂಟಿಸಿರುತ್ತೇನೆ. ನಂತರ ಅಲ್ಲಿಂದ ಯಲ್ಲಾಪುರ ಹೊಸ ಬಸ್ ನಿಲ್ದಾಣಕ್ಕೆ ಬಂದು ಸಾರ್ವಜನಿಕರಿಗೆ ಕಾಣಿಸುವ ರೀತಿಯಲ್ಲಿ ಉದ್ಘೋಷಣಾ ಪ್ರತಿಯನ್ನು ನೋಟಿಸ್ ಬೋರ್ಡಿಗೆ ಅಂಟಿಸಿರುತ್ತೇನೆ. ಹಾಗೆಯೇ ಅಲ್ಲಿಂದ ಯಲ್ಲಾಪುರ ಪೋಲಿಸ್ ಠಾಣೆಗೆ ಬಂದು ಒಂದು ಉದ್ಘೋಷಣಾ ಪ್ರತಿಯನ್ನು ನೋಟಿಸ ಬೋರ್ಡಿಗೆ ಅಂಟಿಸಿರುತ್ತೇನೆ. ಹಾಗೂ ಇನ್ನೊಂದು ಪ್ರತಿಯನ್ನು ಪಟ್ಟಣ ಪಂಚಾಯತ ಯಲ್ಲಾಪುರ ನೋಟಿಸ್ ಬೋರ್ಡಿಗೆ ಅಂಟಿಸಿರುತ್ತೇನೆ. ಸದರಿ ಆರೋಪಿತನ ಬಗ್ಗೆ ಮಾಹಿತಿ ಸಿಕ್ಕಲ್ಲಿ ಕುಮಟಾ ಪೋಲಿಸ್ ಠಾಣೆಗೆ ಮಾಹಿತಿ ಕಳುಹಿಸುವಂತೆ ತಿಳಿಸಿರುತ್ತೇನೆ .

ಪಂಚನಾಮೆಯನ್ನು ಬೆಳಿಗ್ಗೆ 10-00 ಗಂಟೆಯಿಂದ 11-00 ಗಂಟೆಯವರೆಗೆ ಮಾಡಿರುತ್ತೇವೆ . ಸಾಕ್ಷಿ ಸ್ಥಳದಲ್ಲಿ ತಯಾರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ನಿಪಿ -15 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಪಂಚರ ಸಹಿಯನ್ನು ನಿಪಿ-15(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರೊಕ್ಲಮೇಶನ್ ವರದಿಯನ್ನು ನೋಡಿ ಗುರುತಿಸಿದ್ದು ನಿಪಿ-16 ಎಂದು , ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.